Form No.4 (Civil)
Deposition Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 19/2022

ಪ್ರಾ.ಸಾ. 2 ಚಾ.ಸಾ 1

| | | |
|---|---|---|
| ಹೆಸರು | : | ಸಾಬಣ್ಣ |
| ತಂದೆಯ ಹೆಸರು | : | ತಿಮ್ಮಪ್ಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಗಾಜರಕೋಟ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 07-03-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಚಾಸಾ-5 ನನ್ನ ತಂದೆಯವರು ಆಗಿರುತ್ತಾರೆ. ಚಾಸಾ-6 ರಿಂದ 9 ರವರ ಪರಿಚಯ ಇರುತ್ತದೆ. 1ನೇ ಆರೋಪಿ ನನಗೆ ಚಿಕ್ಕಪ್ಪನಾಗಿರುತ್ತಾನೆ. ಉಳಿದ ಆರೋಪಿತರ ಪರಿಚಯ ಇರುತ್ತದೆ. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಘಟನೆ ನಡೆದಿರುವುದಿಲ್ಲ. ಪೊಲೀಸರಿಗೆ ಯಾವುದೇ ದೂರು ಕೊಟ್ಟಿರುವುದಿಲ್ಲ. ಸಾಕ್ಷಿದಾರರಿಗೆ ಈಗ ದೂರು ತೋರಿಸಲಾಗಿದ್ದು ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.6** ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ಪುನಃ ಕರೆಯಿಸಿ ಪುರವಣಿ ಹೇಳಿಕೆ ಪಡೆದುಕೊಂಡಿರುವುದಿಲ್ಲ.

**(ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

2. ನಮ್ಮ ಹಾಗೂ ಆರೋಪಿತರ ನಡುವೆ ಬನ್ನಿ ಜಾಜ್ ಕುರಿತು ನಮ್ಮ ಮತ್ತು 1ನೇ ಆರೋಪಿತರ ನಡುವೆ ವ್ಯಾಜ್ಯ ಇತ್ತು ಎಂದರೆ ಸರಿಯಲ್ಲ. ದಿ: 21.12.2021 ರಂದು ಸಾಯಂಕಾಲ 7.00 ಗಂಟೆಗೆ ನಮ್ಮರಾ ಅಂಬಿಗರ ಚೌಡಯ್ಯ ಮೂರ್ತಿಯ ಹತ್ತಿರ ನಾನು ಇದ್ದಾಗ ಆರೋಪಿತರೆಲ್ಲರೂ ಗುಂಪುಗಟ್ಟಿಕೊಂಡು ಕೈಯಲ್ಲಿ ಮಚ್ಚು ಹಿಡಿದುಕೊಂಡು ನಮ್ಮ ಬಳಿ ಬಂದು

ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. 2 ನೇ ಆರೋಪಿತನು ತನ್ನ ಕೈಯಲ್ಲಿ ಇದ್ದ ಕಲ್ಲಿನಿಂದ ನಮ್ಮ ತಂದೆ ಚಾಸಾ5 ರವರಿಗೆ ಹೊಡೆದು ರಕ್ತಗಾಯ ಪಡಿಸಿದನು ಎಂದರೆ ಸರಿಯಲ್ಲ. 3 ನೇ ಆರೋಪಿತನು ಕಲ್ಲಿನಿಂದ ನನ್ನ ತಂದೆಯ ಬಾಯಿಗೆ ಗಾಯಗೊಳಿಸಿದನು ಎಂದರೆ ಸರಿಯಲ್ಲ. 4 ನೇ ಆರೋಪಿತನು ನನ್ನ ತಂದೆಯ ಎಡಮೊಣಕಾಲಿಗೆ ಮತ್ತು 5 ನೇ ಆರೋಪಿತನು ತನ್ನ ಕೈಯಿಂದ ಎದೆಗೆ ಗುದ್ದಿದನು ಎಂದರೆ ಸರಿಯಲ್ಲ. ನನ್ನ ತಂದೆಯನ್ನು ನಾನು ಬಿಡಿಸಿಕೊಳ್ಳಲು ನಾನು ಮಧ್ಯೆ ಹೋದಾಗ 1 ನೇ ಆರೋಪಿತನು ತನ್ನ ಕೈಯಲ್ಲಿ ಇದ್ದ ಮಚ್ಚಿನಿಂದ ಹೊಡೆಯಲು ಬಂದಾಗ ನಾನು ತಪ್ಪಿಸಿಕೊಂಡೆನು ಎಂದರೆ ಸರಿಯಲಲ. ನಾನು ಸ್ಥಳದಲ್ಲಿ ಚೀರಾಡುತ್ತಿದ್ದಾಗ ಚಾಸಾ-6 ರಿಂದ 9 ರವರು ಬಿಡಿಸಿಕೊಂಡರು ಎಂದರೆ ಸರಿಯಲ್ಲ. ನಂತರ ಆರೋಪಿತರೆಲ್ಲರೂ ಜೀವ ಬೆದರಿಕೆ ಹಾಕಿ ಸ್ಥಳದಿಂದ ಹೋದರು ಎಂದರೆ ಸರಿಯಲ್ಲ. ಈ ಕುರಿತು ನಾನು ನಿ.ಪಿ.6 ರಂತೆ ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

3. ದಿಃ 24.12.2021 ರಂದು ಫಿರ್ಯಾದಿಗೆ ಪೂರಕವಾಗಿ ಪುರವಣಿ ಹೇಳಿಕ ನೀಡಿದ್ದೆನೆ ಎಂದರೆ ಸರಿಯಲ್ಲ. ಸದರಿ ಪುರವಣ ಹೇಳಿಕೆಯನ್ನು **ನಿ.ಪಿ.7** ಎಂದು ಗುರುತಿಸಲಾಯಿತು.

4. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು 1 ಮತ್ತು 2 ನೇ ಆರೋಪಿತರ ಪರವಾಗಿ ಶ್ರೀ.ಎಸ್.ಎ.ಕ್ಯೂ ವಕೀಲರಿಂದ

- ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

ಪಾಟೀ ಸವಾಲು 3 ರಿಂದ 5 ನೇ ಆರೋಪಿತರ ಪರವಾಗಿ ಶ್ರೀ.ಎಸ್.ಎಸ್.ಪಿ. ವಕೀಲರಿಂದ

- ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

ಮರುವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.

Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 19/2022

ಪ್ರಾ.ಸಾ. 3 ಚಾ.ಸಾ 5

| | | |
|---|---|---|
| ಹೆಸರು | : | ತಿಮ್ಮಪ್ಪ |
| ತಂದೆಯ ಹೆಸರು | : | ಗಂಗಪ್ಪ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಗಾಜರಕೋಟ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 07-03-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಚಾಸಾ-1 ನನ್ನ ಮಗ ಆಗಿರುತ್ತಾರೆ. ಚಾಸಾ-6 ರಿಂದ 9 ರವರ ಪರಿಚಯ ಇರುವುದಿಲ್ಲ. 1 ನೇ ಆರೋಪಿ ನನಗೆ ತಮ್ಮನಾಗಿರುತ್ತಾನೆ. ಉಳಿದ ಆರೋಪಿತರ ಪರಿಚಯ ಇರುತ್ತದೆ. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಘಟನೆ ನಡೆದಿರುವುದಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ವಸ್ತುಗಳನ್ನು ಹಾಜರುಪಡಿಸಿರುವುದಿಲ್ಲ.

(**ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.**)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

2. ನಮ್ಮ ಹಾಗೂ ಆರೋಪಿತರ ನಡುವೆ ಬನ್ನಿ ಜಾಜ್ ಕುರಿತು ನಮ್ಮ ಮತ್ತು 1 ನೇ ಆರೋಪಿತರ ನಡುವೆ ವ್ಯಾಜ್ಯ ಇತ್ತು ಎಂದರೆ ಸರಿಯಲ್ಲ. ದಿಃ

21.12.2021 ರಂದು ಸಾಯಂಕಾಲ 7.00 ಗಂಟೆಗೆ ನಮ್ಮರಾ ಅಂಬಿಗರ ಚೌಡಯ್ಯ ಮೂರ್ತಿಯ ಹತ್ತಿರ ಚಾಸಾ-1 ರವರು ಹಾಗೂ ನಾನು ಇದ್ದಾಗ ಆರೋಪಿತರೆಲ್ಲರೂ ಗುಂಪುಗಟ್ಟಿಕೊಂಡು ಕೈಯಲ್ಲಿ ಮಚ್ಚು ಹಿಡಿದುಕೊಂಡು ನಮ್ಮ ಬಳಿ ಬಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. 2 ನೇ ಆರೋಪಿತನು ತನ್ನ ಕೈಯಲ್ಲಿ ಇದ್ದ ಕಲ್ಲಿನಿಂದ ನನಗೆ ಹೊಡೆದು ರಕ್ತಗಾಯ ಪಡಿಸಿದನು ಎಂದರೆ ಸರಿಯಲ್ಲ. 3 ನೇ ಆರೋಪಿತನು ಕಲ್ಲಿನಿಂದ ನನಗೆ ಬಾಯಿಗೆ ಗಾಯಗೊಳಿಸಿದನು ಎಂದರೆ ಸರಿಯಲ್ಲ. 4 ನೇ ಆರೋಪಿತನು ನನಗೆ ಎಡಮೋಣಕಾಲಿಗೆ ಮತ್ತು 5 ನೇ ಆರೋಪಿತನು ನನಗೆ ಎದೆಗೆ ಗುದ್ದಿದನು ಎಂದರೆ ಸರಿಯಲ್ಲ. ನನಗೆ ನನ್ನ ಮಗ ಚಾಸಾ-1 ರವರು ಬಿಡಿಸಿಕೊಳ್ಳಲು ಬಂದಾಗ 1 ನೇ ಆರೋಪಿತನು ತನ್ನ ಕೈಯಲ್ಲಿ ಇದ್ದ ಮಚ್ಚಿನಿಂದ ಹೊಡೆಯಲು ಬಂದಾಗ ಚಾಸಾ-1 ರವರು ತಪ್ಪಿಸಿಕೊಂಡೆನು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-1 ರವರು ಸ್ಥಳದಲ್ಲಿ ಚೀರಾಡುತ್ತಿದ್ದಾಗ ಚಾಸಾ-6 ರಿಂದ 9 ರವರು ಬಿಡಿಸಿಕೊಂಡರು ಎಂದರೆ ಸರಿಯಲ್ಲ. ನಂತರ ಆರೋಪಿತರೆಲ್ಲರೂ ಜೀವ ಬೆದರಿಕೆ ಹಾಕಿ ಸ್ಥಳದಿಂದ ಹೋದರು ಎಂದರೆ ಸರಿಯಲ್ಲ. ಈ ಕುರಿತು ನಾನು ದಿಃ 24.12.2021 ರಂದು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿ.ಪಿ.8** ಎಂದು ಗುರುತಿಸಲಾಯಿತು.

3. ಅದೇ ದಿನ ಸಾಯಂಕಾಲ 4.00-5.30 ಗಂಟೆಯವರೆಗೆ ಚಾಸಾ-2 ಮತ್ತು 4 ರವರ ಸಮಕ್ಷಮ ಗುರುಮಠಕಲ್ ಪೊಲೀಸ ಠಾಣಾ ಆವರಣದಲ್ಲಿ ನನ್ನ ರಕ್ತ ಹತ್ತಿದ್ದ ಅಂಗಿಯನ್ನು ಹಾಜರುಪಡಿಸಿದ್ದೇನು ಎಂದರೆ ಸರಿಯಲ್ಲ. ಪೊಲೀಸರು ಅದನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

4. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ 1 ನೇ ಆರೋಪಿ ನನ್ನ ಸಂಬಂಧಿಕರು ಆಗಿದ್ದರಿಂದ ಮತ್ತು ಉಳಿದ ಆರೋಪಿತರು ಸಂಬಂಧಿಕರು

ಆಗಿದ್ದರಿಂದ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು 1 ಮತ್ತು 2 ನೇ ಆರೋಪಿತರ ಪರವಾಗಿ ಶ್ರೀ.ಎಸ್.ಎ.ಕ್ಯೂ ವಕೀಲರಿಂದ</u>

- ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

<u>ಪಾಟೀ ಸವಾಲು 3 ರಿಂದ 5 ನೇ ಆರೋಪಿತರ ಪರವಾಗಿ ಶ್ರೀ.ಎಸ್.ಎಸ್.ಪಿ. ವಕೀಲರಿಂದ</u>

- ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.

Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 19/2022

ಪ್ರಾ.ಸಾ. 4 ಚಾ.ಸಾ 6

| | | |
|---|---|---|
| ಹೆಸರು | : | ಆಶಪ್ಪ |
| ತಂದೆಯ ಹೆಸರು | : | ಮೋಗಲಪ್ಪ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಗಾಜರಕೋಟ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 07-03-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-1 ಮತ್ತು 5, 7 ರಿಂದ 9 ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುತ್ತದೆ. ಚಾಸಾ-1, 5 ಹಾಗೂ ಆರೋಪಿತರ ನಡುವೆ ಏನ ಘಟನೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿದಾರರಿಗೆ ಈಗ ಘಟನಾ ಸ್ಥಳದ ಪಂಚನಾಮೆಯನ್ನು ತೋರಿಸಲಾಗಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಲಾಗಿದ್ದು ಸಾಕ್ಷಿದಾರರ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತಯಾರಿಸಿದ ಕಚ್ಚಾ ನಕಾಶೆಯನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು ಸಾಕ್ಷಿದಾರರ ಸಹಿಯನ್ನು **ನಿ.ಪಿ.2(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಭಾವಚಿತ್ರವನ್ನು ತೋರಿಸಲಾಗಿದ್ದು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದೆ. ನಿ.ಪಿ.3 ನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

**(ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

2. ಚಾಸಾ-1 ಮತ್ತು 5 ಹಾಗೂ ಆರೋಪಿತರ ನಡುವೆ ಬನ್ನಿ ಜಾಜ್ ಕುರಿತು ಚಾಸಾ-1, 5 ಮತ್ತು 1ನೇ ಆರೋಪಿತರ ನಡುವೆ ವ್ಯಾಜ್ಯ ಇತ್ತು ಎಂದರೆ ಸರಿಯಲ್ಲ. ದಿಃ 21.12.2021 ರಂದು ಸಾಯಂಕಾಲ 7.00 ಗಂಟೆಗೆ ನಮ್ಮರಾ ಅಂಬಿಗರ ಚೌಡಯ್ಯ ಮೂರ್ತಿಯ ಹತ್ತಿರ ಚಾಸಾ-1 ಮತ್ತು 5 ರವರು ಇದ್ದಾಗ ಆರೋಪಿತರೆಲ್ಲರೂ ಗುಂಪುಗಟ್ಟಿಕೊಂಡು ಕೈಯಲ್ಲಿ ಮಚ್ಚು ಹಿಡಿದುಕೊಂಡು ಚಾಸಾ-1 ಮತ್ತು 5 ರವರ ಬಳಿ ಬಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. 2ನೇ ಆರೋಪಿತನು ತನ್ನ ಕೈಯಲ್ಲಿ ಇದ್ದ ಕಲ್ಲಿನಿಂದ ಚಾಸಾ-5 ರವರಿಗೆ ಹೊಡೆದು ರಕ್ತಗಾಯ ಪಡಿಸಿದನು ಎಂದರೆ ಸರಿಯಲ್ಲ. 3ನೇ ಆರೋಪಿತನು ಕಲ್ಲಿನಿಂದ ಚಾಸಾ-5 ರವರಿಗೆ ಬಾಯಿಗೆ ಗಾಯಗೊಳಿಸಿದನು ಎಂದರೆ ಸರಿಯಲ್ಲ. 4ನೇ ಆರೋಪಿತನು ಚಾಸಾ-5 ಎಡಮೋಣಕಾಲಿಗೆ ಮತ್ತು 5ನೇ ಆರೋಪಿತನು ಚಾಸಾ-5 ರವರಿಗೆ ಎದೆಗೆ ಗುದ್ದಿದನು ಎಂದರೆ ಸರಿಯಲ್ಲ. ಚಾಸಾ-5 ರವರನ್ನು ಚಾಸಾ-1 ರವರು ಬಿಡಿಸಿಕೊಳ್ಳಲು ಬಂದಾಗ 1ನೇ ಆರೋಪಿತನು ತನ್ನ ಕೈಯಲ್ಲಿ ಇದ್ದ ಮಚ್ಚಿನಿಂದ ಹೊಡೆಯಲು ಬಂದಾಗ ಚಾಸಾ-1 ರವರು ತಪ್ಪಿಸಿಕೊಂಡೆನು ಎಂದರೆ ಸರಿಯಲ್ಲ. ಚಾಸಾ-1 ಮತ್ತು 5 ರವರು ಸ್ಥಳದಲ್ಲಿ ಚೀರಾಡುತ್ತಿದ್ದಾಗ ನಾನು ಹಾಗೂ ಚಾಸಾ-7 ರಿಂದ 9 ರವರು ಬಿಡಿಸಿಕೊಂಡೇವು ಎಂದರೆ ಸರಿಯಲ್ಲ. ನಂತರ ಆರೋಪಿತರೆಲ್ಲರೂ ಜೀವ ಬೆದರಿಕೆ ಹಾಕಿ ಸ್ಥಳದಿಂದ ಹೋದರು ಎಂದರೆ ಸರಿಯಲ್ಲ. ಈ ಕುರಿತು ನಾನು ದಿಃ 23.12.2021 ರಂದು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿ.ಪಿ.9** ಎಂದು ಗುರುತಿಸಲಾಯಿತು.

3. ಅದೇ ದಿನ ಸಾಯಂಕಾಲ ಮುಂಜಾನೆ 8.00-9.00 ಗಂಟೆಯವರೆಗೆ ಪೊಲೀಸರು ಸ್ಥಳ ಪಂಚನಾಮೆ ಮಾಡಲು ಬಂದಾಗ ಚಾಸಾ-2 ಮತ್ತು 3 ರವರ ಹಾಜರು ಇದ್ದು ನಾನು ಸ್ಥಳ ತೋರಿಸಿದ್ದು ಸ್ಥಳದಿಂದ ಮೂರು ಕಲ್ಲುಗಳನ್ನು ಜಪ್ತಿ ಮಾಡಿ ನಿ.ಪಿ.1 ರಂತೆ ಸ್ಥಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿಯೇ ನಿ.ಪಿ.2 ರಂತೆ ಕರಡು ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.3 ರಂತೆ ಭಾವಚಿತ್ರವನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

4. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು 1 ಮತ್ತು 2 ನೇ ಆರೋಪಿತರ ಪರವಾಗಿ ಶ್ರೀ.ಎಸ್.ಎ.ಕ್ಯೂ ವಕೀಲರಿಂದ

- ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

ಪಾಟೀ ಸವಾಲು 3 ರಿಂದ 5 ನೇ ಆರೋಪಿತರ ಪರವಾಗಿ ಶ್ರೀ.ಎಸ್.ಎಸ್.ಪಿ. ವಕೀಲರಿಂದ

- ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

ಮರುವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.

Form No.4 (Civil)
Deposition Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 19/2022

ಪ್ರಾ.ಸಾ. 5 ಚಾ.ಸಾ 4

| | | |
|---|---|---|
| ಹೆಸರು | : | ಚನ್ನಬಸಪ್ಪ |
| ತಂದೆಯ ಹೆಸರು | : | ಭೀಮಣ್ಣ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಗಾಜರಕೋಟ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 07-03-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-2 ಮತ್ತು 5 ರವರ ಪರಿಚಯ ಇರುತ್ತದೆ. ಪೊಲೀಸರು ನನ್ನ ಹಾಗೂ ಚಾಸಾ-2 ರವರನ್ನು ಕರೆಯಿಸಿ ಒಂದು ದಾಖಲೆಗೆ ಸಹಿ ಪಡೆಕೊಂಡಿರುತ್ತಾರೆ. ಸದರಿ ದಾಖಲೆಯನ್ನು **ನಿ.ಪಿ.10** ಎಂದು ಸಾಕ್ಷಿದಾರರ ಸಹಿಯನ್ನು **ನಿಪಿ.10(ಎ)**ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಂದು ಭಾವಚಿತ್ರವನ್ನು ತೆಗೆದಿರುತ್ತಾರೆ ಅದನ್ನು **ನಿ.ಪಿ.11** ಎಂದು ಗುರುತಿಸಲಾಯಿತು. ನಿ.ಪಿ.11 ನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

(**ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ**.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

2. ದಿಃ 24.12.2021 ರಂದು ಸಾಯಂಕಾಲ 4.30 ಗಂಟೆಗೆ ನನ್ನನ್ನು ಹಾಗೂ ಚಾಸಾ-2 ರವರನ್ನು ಗುರುಮಠಕಲ ಪೊಲೀಸ ಠಾಣೆಗೆಕರೆಯಿಸಿ ಚಾಸಾ-5 ರವರು ಹಾಜರು ಪಡಿಸಿದ ರಕ್ತ ಹತ್ತಿದ್ದ ಅಂಗಿಯನ್ನು 4.30-5.30 ಗಂಟೆಯವರೆಗೆ ಜಪ್ತಿಪಡಿಸಿಕೊಂಡು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.10 ರಂತೆ ಜಪ್ತಿಪಡಿಸಿಕೊಂಡು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿಯೇ ನಿ.ಪಿ.11 ರಂತೆ ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

3. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು 1 ಮತ್ತು 2 ನೇ ಆರೋಪಿತರ ಪರವಾಗಿ ಶ್ರೀ.ಎಸ್.ಎ.ಕ್ಯೂ ವಕೀಲರಿಂದ

- ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

ಪಾಟೀ ಸವಾಲು 3 ರಿಂದ 5 ನೇ ಆರೋಪಿತರ ಪರವಾಗಿ ಶ್ರೀ.ಎಸ್.ಎಸ್.ಪಿ. ವಕೀಲರಿಂದ

- ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

ಮರುವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.